- -

**ಅಸಲು ದಾವ ಸಂಖ್ಯೆಃ 875/2022**

**ಪಿ.ಡಬ್ಲೂ -1**

**ದಿಃ 27-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದಃ ಶ್ರೀಮತಿ ಜೆ ಎಸ್ ಬಿ ರವರಿಂದಃ-**

ನಿಪಿ-1 ರ ದಾಖಲೆಯನ್ನು ನಾನೇ ಹಾಜರು ಪಡೆಸಿರುತ್ತೇನೆ ಎಂದರೆ ಸರಿ. ನಿಪಿ-1 ರ 10ನೇ ಕಾಲಂ ನಲ್ಲಿ ವಾಟಣಿ ಪತ್ರದ ಪ್ರಕಾರ ವಿಭಜನೆ ಎಂದು ನಮೂದು ಮಾಡಿರುತ್ತ-ರಾ ಎಂದರೆ ಸಾಕ್ಷಿ ಅದರ ಕುರಿತು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ಉತಾರ ಮಾಡಬೇಕಾದರೆ ನಮ್ಮಿಂದ ಕಾಗದ ಪತ್ರಗಳನ್ನು ಪಡೆದಿರುತ್ತಾರೆ ಎಂದರೆ ಸರಿ. ಮಾರುತಿ ಕರವಿನಕೊಪ್ಪ ಎಂದರೆ ನನ್ನ ಅಣ್ಣನ ಮಗ ಆಗಿರುತ್ತಾನೆ. ಸರ್ವೆ ನಂಬರ 56/4 ರ ಜಮೀನಿನ ವಹಿವಾಟಿನಲ್ಲಿ ಸದರಿ ಮಾರುತಿ ಕರವಿನಕೊಪ್ಪರವರು ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ವಯಸ್ಸಾಗಿರುತ್ತದೆ ಹಾಗೂ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಖೊಟ್ಟಿ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹಾಜರು ಪಡೆಸಿ ದಾವಾ ಸ್ವತ್ತು ನನಗೆ ಸೇರಬೇಕೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

Sd/-

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**